ಸಿ.ಸಿ .ನಂ. 14/2023 ಪಿಡಬ್ಲೂಃ 1

ದಿನಾಂಕಃ 19-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಾಯ್ ಆರ್ ಎಮ್ ವಕೀಲರಿಂದಃ**

6. ಸಾಲದ ಅರ್ಜಿಯಲ್ಲಿ ಮಂಜೂರು ಎಂದು ವ್ಯವಸ್ಥಾಪಕರ ಷರಾ ಇರುತ್ತದೆ . ಈ ಪ್ರಕರಣದಲ್ಲಿ ಇರುವ ಸಾಲದ ಅರ್ಜಿಯಲ್ಲಿ ಷರಾ ಬರೆಯಲಾಗಿದೆ . 3 ಲಕ್ಷ ರೂಪಾಯಿ ಸಾಲ ಮಂಜೂರು ಮಾಡಿ ಸಹಿ ಮಾಡಿದ್ದಾರೆ. ಷರಾ ಎಷ್ಟು ಕಂತು ತುಂಬೇಕು , ಅರ್ಜಿದಾರರ ಉದ್ಯೋಗ ಯಾವುದು ನಮೂದು ಆಗಿಲ್ಲ ಎಂದರೆ ಸರಿ . ಅದರಲ್ಲಿ ಖಾಲಿ ಬಿಟ್ಟ ಸ್ಥಳ ಇದೆ ಎಂದರೆ ಸರಿ . ಆಡಳಿತಿ ಮಂಡಳಿಯ ಠರಾವನ್ನು ನೋಡಿದಾಗ ಮಾತ್ರ ನಿಖರವಾಗಿ ಸಾಲ ಮಂಜೂರಾಗಿರುವುದು ಗೊತ್ತಾಗುತ್ತದೆ ಎಂದರೆ ಸರಿ .

7. ಹೆಗಡೆಯಲ್ಲಿ ನಾಗೇಶ ಶೆಟ್ಟಿ ಎಂಬ ಹೆಸರಿನವರು ಎಷ್ಟು ಜನರು ಇದ್ದಾರೆ ಎಂದು ಹೇಳಲು ಆಗುವುದಿಲ್ಲ. ಆರೋಪಿಯ ವಿಳಾಸಕ್ಕೆ ನಾವು ನೋಟಿಸನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಾವು ವಿಳಾಸದಲ್ಲಿ ಜನಮಕ್ಕಿ ಹೆಗಡೆ ಎಂದು ನಿಖರವಾದ ವಿಳಾಸವನ್ನು ಬರೆದಿದ್ದರೆ ನೋಟಿಸು ಆರೋಪಿಗೆ ತಲುಪುತ್ತಿತ್ತು ಎಂದರೆ ಸಾಕ್ಷಿ ನಿಖರವಾದ ಅಡ್ರೆಸ್ ಗೆ ನೋಟಿಸು ಕಳುಹಿಸಲಾಗಿದೆ ಎಂದು ನುಡಿದಿರುತ್ತಾರೆ . ಆರೋಪಿ ನೋಟಿಸನ್ನು ಸ್ವೀಕಾರ ಮಾಡಿದ್ದಾರೆ . ಸ್ವೀಕೃತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ . ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-8 ನ್ನು ಅಂಚೆ ಲಕೋಟೆಯನ್ನು ನಾವು ಆರೋಪಿಗೆ ಕಳುಹಿಸಿದ ನೋಟಿಸು ಎಂದು ಕಡತವನ್ನು ಗುರುತಿಸಿರುತ್ತಾರೆ . ಆರೋಪಿ ನೋಟಿಸನ್ನು ಯಾವತ್ತೂ ಸ್ವೀಕಾರ ಮಾಡಿಲ್ಲ . ನಾವು ಅವರ ಸರಿಯಾದ ವಿಳಾಸಕ್ಕೆ ನೋಟಿಸು ಕಳಿಸಿಲ್ಲ ಕಾರಣ ಅದು ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಚೆಕ್ ನ ಮೇಲಿರುವ ಬರವಣಿಗೆ ನಮ್ಮ ಬ್ಯಾಂಕಿನ ಸಿಬ್ಬಂದಿಯವರೇ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಚೆಕ್ ನ ಮೇಲೆ ಸಹಿಯನ್ನು ಆರೋಪಿ ಯಾವತ್ತೂ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ . ಚೆಕ್

ಪಿಡಬ್ಲೂಃ 1

ಮೇಲೆ ಇರುವ ಬರವಣಿಗೆಯನು ನಮ್ಮ ಸಿಬ್ಬಂದಿಯವರೇ ಬರೆದು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಲಗಾರ ಯಾವತ್ತೂ ಕಟಬಾಕಿ ಮಾಡಿಲ್ಲ ಹಾಗೂ ಹಣ ಸಂದಾಯಕ್ಕೆ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ಚೆಕ್ ನ ಮೇಲಿರುವ ಮೊತ್ತವನ್ನು ಮನಸೋ ಇಚ್ಛೆ ಬರೆದು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ . ಸಾಲದ ಅರ್ಜಿ ಯಾವತ್ತೂ ಮಂಜೂರಾಗಿಲ್ಲ , ಒಂದುವೇಳೆ ಮಂಜೂರಾದರೆ ಅದಕ್ಕೆ ಸಂಬಂಧಪಟ್ಟ ದಾಖಲಾತಿ ಹಾಜರು ಪಡಿಸುತ್ತಿದ್ದೆವು ಎಂದರೆ ಸಾಕ್ಷಿ ದಾಖಲಾತಿ ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ . ನಾವು ಆರೋಪಿಗೆ ಬ್ಯಾಂಕಿನ ಮೂಲಕ ವಕೀಲರ ಮೂಲಕ ಯಾುವುದೇ ನೋಟಿಸನ್ನು ಕೊಟ್ಟಿಲ್ಲ . ನಿಖರ ವಿಳಾಸಕ್ಕೆ ನೋಟಿಸು ಕೊಟ್ಟಿದ್ದರೆ ಅದು ತಲುಪುತ್ತಿತ್ತು ಎಂದರೆ ಸರಿಯಲ್ಲ . ಕಾನೂನುಬದ್ಧವಾಗಿ ಆರೋಪಿ ಯಾವತ್ತೂ ಹಣ ಸಂದಾಯ ಮಾಡುವುದು ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ನಾವೇ ಸೃಷ್ಟಿ ಮಾಡಿ ಹಾಕಿದ್ದೇವೆ ಹೊರತು ಆರೋಪಿ ನೀಡಿದ್ದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.